**ವ್ಯಾಖ್ಯಾನ**

# <u>ಹರಿಯ ಚರಣವೆಂಬ ಸುರಧೇನವನು</u>

ಪುರಂದರ ದಾಸರು ಈ ಮುಂಡಿಗೆಯಲ್ಲಿ ಉಲ್ಲೇಖಿಸಿದಂತೆ, ಹರಿಸ್ಮರಣೆ ಎಂಬ ಹೋಳಿಗೆಗೆ ಭಕ್ತಿ ಎಂಬ ತುಪ್ಪ ಹಚ್ಚಿ ಸವಿಯುವ ಈ ಚಿತ್ರಣವು ಮನುಷ್ಯನ ಜೀವನದ ಪರಮ ಗುರಿಯನ್ನು ಅತ್ಯಂತ ಸರಳವಾಗಿ ಮತ್ತು ಉಪಮೇಯಗಳೊಂದಿಗೆ ಮನಮುಟ್ಟುವಂತೆ ವಿವರಿಸಿದ್ದಾರೆ.

**ಶ್ರೀ ಪುರಂದರ ದಾಸರ ಮುಂಡಿಗೆಯ ಚಿಂತನೆ:**

**ಹರಿಯ ಚರಣವೆಂಬ ಸುರಧೇನವನು**
**ಗುರುಬೋಧೆಯೆಂಬ ಕಣ್ಣಿಯಲಿ ಕಟ್ಟಿರಯ್ಯ || ಪ ||**

ಶ್ರೀಹರಿಯ ಪಾದಗಳೇ ನಮಗೆ ಬೇಕಾದ ಎಲ್ಲವನ್ನೂ ನೀಡುವ 'ಸುರಧೇನು' (ಕಾಮಧೇನು). ಅಂತಹ ಪವಿತ್ರವಾದ ಹಸುವನ್ನು ನಾವು ನಮ್ಮಲ್ಲಿ ನೆಲೆಸುವಂತೆ ಮಾಡಬೇಕಾದರೆ, ಮೊದಲು ಅದನ್ನು ಕಟ್ಟಬೇಕು. ಆ ಹಸುವನ್ನು ಕಟ್ಟಲು ಬಳಸುವ ಹಗ್ಗವೇ (ಕಣ್ಣಿ) **'ಗುರುಬೋಧೆ'**. ಅಂದರೆ, ಗುರುವಿನ ಉಪದೇಶವೆಂಬ ಹಗ್ಗದಿಂದ ಭಗವಂತನ ಪಾದಗಳನ್ನು ನಮ್ಮ ಹೃದಯದಲ್ಲಿ ಭದ್ರವಾಗಿ ಸ್ಥಾಪಿಸಬೇಕು ಎಂಬುದು ದಾಸರ ಮೊದಲ ಮಾರ್ಗದರ್ಶನ.

**<u>ವಿಶೇಷಾರ್ಥ</u>**: 'ಉತ್ತಮಾನಾಂ ಸ್ವರೂಪಂ ತು ಪಾದ ಶಬ್ದೇನ ಕಥ್ಯತೇ'
ಉತ್ತಮರ ಸ್ವರೂಪವನ್ನೇ ಪಾದ ಎಂಬ ಅರ್ಥದಲ್ಲಿ ಚಿಂತನೆ ಮಾಡುವ ಕ್ರಮವಿದೆ. ಶ್ರೀಪಾದರು ಭಗವತ್ಪಾದರು ಎಂಬುದಾಗಿ. ಹೀಗಿರುವಾಗ ಭಗವಂತನಲ್ಲಿ ಇದು ಸಹಜವೇ. ಇದಲ್ಲದೆ ದೇವರು ಸ್ವಗತ ಭೇದ ವಿವರ್ಜಿತ ಅವನ ಎಲ್ಲಾ ಅಂಗಗಳು ಅವನೇ. ಅವನಿಗೂ ಅವನ ಅಂಗಗಳಿಗೂ ಭೇದವಿಲ್ಲ

**ಭಕುತಿಯೆಂಬ ಕರುವನೆ ಬಿಟ್ಟು ನಿರುತ ವಿ-**
**ರಕುತಿಯೆಂಬ ಚೆನ್ನದಳಿಯ ಹಾಕಿ**
**ಯುಕುತವಾದ ನಿತ್ಯಕಾಯ ಚರಿಗೆಯೊಳು**
**ಮುಕುತಿ ನಾಮಾಮೃತ ಕರೆದುಕೊಳ್ಳಿರಯ್ಯ || ೧ ||** **(ಹಾಲು ಕರೆಯುವ ಪ್ರಕ್ರಿಯೆ)**

ಹಸುವಿನಿಂದ ಹಾಲು ಪಡೆಯಲು ಮೊದಲು ಕರುವನ್ನು ಬಿಡಬೇಕು. ಇಲ್ಲಿ **'ಭಕ್ತಿ'ಯೇ ಕರು**. ಭಕ್ತಿಯಿಂದ ಭಗವಂತನನ್ನು ಒಲಿಸಿಕೊಳ್ಳಬೇಕು. ಹಾಲು ಕರೆಯುವಾಗ ಹಸು ಒದೆಯದಂತೆ ಕಾಲಿಗೆ 'ದಳಿ' (ಹಗ್ಗ)

ಹಾಕುತ್ತಾರೆ. ಇಲ್ಲಿ **'ವಿರಕ್ತಿ'ಯೇ ದಳಿ**. ಸಂಸಾರದ ಮೇಲಿನ ವಿರಕ್ತಿಯಿದ್ದರೆ ಮಾತ್ರ ಸಾಧನೆಯಲ್ಲಿ ಸ್ಥಿರತೆ ಸಾಧ್ಯ. ಇಂದ್ರಿಯ ನಿಗ್ರಹವೆಂಬ ಸುಸಜ್ಜಿತವಾದ ಪಾತ್ರೆಯಲ್ಲಿ (ಚರಿಗೆ), ಭಗವಂತನ ನಾಮಸ್ಮರಣೆಯ ಮೂಲಕ **'ಮುಕ್ತಿ'** ಎಂಬ ಹಾಲನ್ನು ಕರೆದುಕೊಳ್ಳಿ.

**<u>ವಿಶೇಷಾರ್ಥ</u>**: 'ಮಹಾತ್ಮ್ಯ ಜ್ಞಾನಪೂರ್ವಸ್ತು ಸುದೃಢಃ ಸರ್ವತೋಧಿಕಃ ಸ್ನೇಹೊ ಭಕ್ತಿ ರಿತಿ ಪ್ರೋಕ್ತಃ' ಅಂತ, ಹಾಗಾಗಿ ಭಗವಂತನ ಮಹಾತ್ಮೆ ತಿಳಿಯುತ್ತಾ ಅನೇಕ ಮಜಲುಗಳಲ್ಲಿ ಅವನನ್ನು (ಗುಣ ರೂಪ ಕ್ರಿಯೆಗಳನ್ನು) ತಿಳಿಯುತ್ತಾ ಸಾಗುವುದೇ ಭಕ್ತಿ ಎಂಬುದಾಗಿ ಕರೆಸಿಕೊಳ್ಳುತ್ತದೆ.

ಕರುವಿನಂತೆ ಭಗವಂತನಲ್ಲಿ ವಿನಯ ಶರಣಾಗತಿ, ದಾಸ್ಯ ಭಾವದಿಂದ ಬಳಿ ಸಾರಿದಾಗ ಅವನು ಪ್ರೀತಿಯಿಂದ ತನ್ನನ್ನು ತೋರಿಸಿಕೊಳ್ಳುತ್ತಾನೆ. ಇಲ್ಲಿ ಹಸು ಕರುವಿಗಾಗಿ ಹಾಲು ಸುರಿಸಿದಂತೆ. ರಾಗ ಎಂದರೆ "ಅಶೋಭನೆ ಶೋಭನಾ ಧ್ಯಾಸಃ" ಅಂದರೆ ಒಳಿತಲ್ಲದನ್ನೇ ಒಳಿತು ಎಂದು ತಿಳಿಯುವುದು. ಇದನ್ನು ಬಿಡುವುದೇ ವಿರಾಗ ಅಥವಾ ವಿರಕ್ತಿ ಆಗ ಭಗವಂತನ ಒಲಮೆಗೆ ದಾರಿ ಸುಲಭವಾಗುತ್ತದೆ.

**ಕಾಮ ಕ್ರೋಧ ಲೋಭ, ಮೋಹ ಮದ ಮತ್ಸರಗಳೆಂಬ**
**ಹಮ್ಮೆಂಬ ಕುರುಳನೆ ತಾಳಿಹಾಕಿ**
**ತಾಮಸ ಜ್ಞಾನಾಗ್ನಿ ಪುಟಗೈದು ಇಂದ್ರಿಯ**
**ನೇಮದ ನೀರ ಬೆರಸಿ ಕಾಯಲಿಡಿರೊ || ೨ ||** **(ಹಾಲನ್ನು ಕಾಯಿಸುವುದು)**

ಕರೆದ ಹಾಲನ್ನು ಕಾಯಿಸಬೇಕಾದರೆ ಒಲೆ ಮತ್ತು ಉರುವಲು ಬೇಕು. ನಮ್ಮಲ್ಲಿರುವ **ಅರಿಷಡ್ವರ್ಗಗಳೇ** ಮತ್ತು **'ಅಹಂಕಾರ'ವೇ (ಹಮ್ಮು) ಉರುವಲು (ಕುರುಳು)**. ಇಂತಹ ಉರುವಲನ್ನು ಸುಟ್ಟು ತಪಸ್ಸಿನ ಅಥವಾ ಧ್ಯಾನದ **ಜ್ಞಾನಾಗ್ನಿ**ಯನ್ನು ಉರಿಸಬೇಕು. ಇಂದ್ರಿಯ ನಿಗ್ರಹವೆಂಬ ನೇಮದ ನೀರನ್ನು ಬೆರೆಸಿ, ಜ್ಞಾನದ ಕಿಚ್ಚಿನಲ್ಲಿ ಈ ಸಾಧನೆಯನ್ನು ಪಕ್ವಗೊಳಿಸಬೇಕು. ಅಂದರೆ, ನಮ್ಮೊಳಗಿನ ಕೆಟ್ಟ ಗುಣಗಳನ್ನು ಸಾಧನೆಯ ಉರಿಯಲಿ ಸುಟ್ಟುಹಾಕಬೇಕು.

**<u>ವಿಶೇಷಾರ್ಥ</u>**: ಈ ಹಾದಿ ಒಮ್ಮೆಲೇ ದೊರೆಯುವಂತದ್ದು ಅಲ್ಲ. ಇದು ಒಂದು ಪ್ರಕ್ರಿಯೆ. ಒಬ್ಬ ಸಾಧಕನಾದವ ಕೆಟ್ಟದ್ದನ್ನು ತೊರೆಯುತ್ತಾ ಒಳಿತನ್ನು ರೂಢಿಗೊಳಿಸಿಕೊಳ್ಳುತ್ತಾ ತನ್ನನ್ನು ಶುದ್ಧಿಗೊಳಿಸಿಕೊಳ್ಳಬೇಕು. ಹೇಗೆ ಹದವಾದ ಬೆಂಕಿಯಲ್ಲಿ ನಿಧಾನವಾಗಿ ಕಾದ ಹಾಲು ಕೆನೆಗಟ್ಟುತ್ತದೆಯೋ ಹಾಗೆ ತನ್ನ ದೌರ್ಬಲ್ಯಗಳನ್ನು ಸುಡುತ್ತಾ ಒಳ್ಳೆಯ ಚಿಂತನೆಗಳನ್ನು ಒಳಗೆ ತುಂಬುತ್ತಾ ಸಾಗಿದ ಸಾಧಕ ಬಗೆಯಲ್ಲಿ ಭಗವಂತನನ್ನು ಕಾಣಬಲ್ಲ. ಇದೆ ಧ್ಯಾನದ ಸ್ಥಿತಿ. ಇದು ಅಂತಃಕರಣ ಶುದ್ಧಿಯ ಪ್ರತೀಕ-ಇಂದ್ರಿಯ ನಿಗ್ರಹವೇ ದಮ.

**ಶಾಂತಗುಣವೆಂಬ ಹದನರಿತು ಆರಿಸಿ ಮತ್ತೆ**
**ಭ್ರಾಂತಮನ ಮಜ್ಜಿಗೆಯ ಹೆಪ್ಪನಿಕ್ಕಿ**
**ಕಾಂತವಿಷ್ಣು ಮಾಯಾ ಮಂಥದಿ ಶೋಧಿಸಿ ಸಿ –**
**ದ್ಧಾಂತವೆಂಬ ಕಡಗೋಲ ನೇಣನೆ ಪಿಡಿದು || ೩ || (ಹೆಪ್ಪು ಹಾಕಿ ಕಡೆಯುವುದು)**

ಕಾಯಿಸಿದ ಹಾಲು ಆರಿದ ಮೇಲೆ ಹೆಪ್ಪು ಹಾಕಬೇಕು. ಇಲ್ಲಿ **ಶಾಂತಗುಣ**ವೇ ಹದ. ಚಂಚಲವಾದ ಮನಸ್ಸನ್ನು (ಭ್ರಾಂತಮನ) ಸ್ಥಿರಗೊಳಿಸಿ ಅದಕ್ಕೆ ಭಕ್ತಿಯ ಹೆಪ್ಪನ್ನು ಹಾಕಬೇಕು. ನಂತರ ಅದನ್ನು ಕಡೆಯಲು ಕಡಗೋಲು (ಮಂಥ) ಮತ್ತು ಹಗ್ಗ ಬೇಕು. ವಿಷ್ಣುವಿನ ಇಚ್ಛೆಯಿಂದ/ಅನುಗ್ರಹದಿಂದ ಪ್ರಕೃತಿಯ ಗುಣಗಳನ್ನ(ಸತ್ವ, ರಜ, ತಮ) ಮೀರುವ ಸಂಕಲ್ಪದೊಂದಿಗೆ, ಸರಿಯಾದ ಜ್ಞಾನ ಅಥವಾ **'ಸಿದ್ಧಾಂತ'ವೆಂಬ ಕಡಗೋಲನ್ನು** ಹಿಡಿದು ಜೀವನವನ್ನು ಮಂಥನ ಮಾಡಬೇಕು. ಆಗ ಸತ್ಯದ ಸಾಕ್ಷಾತ್ಕಾರವಾಗುತ್ತದೆ.

**<u>ವಿಶೇಷಾರ್ಥ</u>**: ಈ ಧ್ಯಾನ ಸ್ಥಿತಿ "ಶಮ". ದೇವರ ನೆನಪನ್ನು ನಿರಂತರವಾಗಿ ಕೊಡುತ್ತದೆ. ಅದಕ್ಕೆ ಶಾಸ್ತ್ರದ ಚೌಕಟ್ಟು ಸೇರಿದಾಗ ತತ್ವದ ಯಥಾರ್ಥ ಜ್ಞಾನ ಆಗುತ್ತದೆ. ಈ ಲೌಕಿಕವಾದ ತಡೆಯನ್ನು ಮೀರಿ ದೇವರ ಸಾಕ್ಷಾತ್ಕಾರದೆಡೆಗೆ ಸಾಧಕನನ್ನು ಕೊಂಡೊಯ್ಯುತ್ತದೆ. ಇದೇ ಹಾಲು ಮೊಸರಾಗಿ ಬೆಣ್ಣೆಯಾಗಿ ದೊರಕುವ ಮಂಥನ ಪ್ರಕ್ರಿಯೆ. 'ಅಂತೇ ಸಿದ್ಧಸ್ತು ಸಿದ್ಧಾಂತಃ' ಅಲ್ಲವೇ.. 'ಶಮೋ ಮನ್ನಿಷ್ಠತಾ ಬುದ್ಧೇಃ...'

**ಪರಬೊಮ್ಮನೆನಿಪ ಬೆಣ್ಣೆಯ ಮುದ್ದಿಯನೆ ತೆಗೆದು**
**ಶರಣಮಣಿಯೆಂಬ ತುಪ್ಪವನೆ ಕಾಯಿಸಿ**
**ಮರಣವೆಂಬ ನೊರೆ ತೆಗೆದೊಗೆದು ಅಮೃತವ**
**ನಿರುತ ಹೃದಯವೆಂಬ ಕೊಡವನೆ ತುಂಬಿರೊ || ೪ || (ಬೆಣ್ಣೆ ತೆಗೆದು ತುಪ್ಪ ಕಾಯಿಸುವುದು)**

ಮಂಥನ ಮಾಡಿದಾಗ ಬರುವ **ಬೆಣ್ಣೆಯೇ 'ಪರಬ್ರಹ್ಮ'**. ಆ ಬೆಣ್ಣೆಯನ್ನು ಕಾಯಿಸಿ ತುಪ್ಪ ಮಾಡುವ ಪ್ರಕ್ರಿಯೆಯೇ **'ಶರಣಾಗತಿ'**. ತುಪ್ಪ ಕಾಯಿಸುವಾಗ ಬರುವ ಕಸ ಅಥವಾ ನೊರೆಯೇ **'ಮರಣ'** ಅಥವಾ ಜನನ-ಮರಣದ ಭಯ. ಈ ಅಶಾಶ್ವತವಾದ ನೊರೆಯನ್ನು ತೆಗೆದು ಹಾಕಿ, ಸಿದ್ಧವಾದ 'ಅಮೃತ'ವೆಂಬ ಪರಮಾನಂದದ ತುಪ್ಪವನ್ನು ನಮ್ಮ **ಹೃದಯವೆಂಬ ಕೊಡದಲ್ಲಿ** ಸದಾ ತುಂಬಿರಬೇಕು.

**<u>ವಿಶೇಷಾರ್ಥ</u>**: ಕಡೆದ ಬೆಣ್ಣೆಯನ್ನು ಹಾಗೆಯೇ ಇಡುವಂತಿಲ್ಲ. ಕಾಯಿಸಿ ಪಕ್ವವಾದ ತುಪ್ಪವಾಗಬೇಕು. ಹಾಗೆಯೇ ಈ ಕಡೆದ ಪ್ರಕ್ರಿಯೆಯಲ್ಲಿ ಸಿಕ್ಕ ಭಗವಂತನ ಜ್ಞಾನ ಪಕ್ವವಾಗಿ ಸಾಧಕನ ಅನುಭಾವವಾಗಿ ಕೂಡಬೇಕು. ಆಗ ಈ ಸಂಸಾರ ಚಕ್ರ ತುಪ್ಪದ ನೊರೆಯಂತೆ ಅಶಾಶ್ವತವೆಂಬ ಜ್ಞಾನದಿಂದ ಸಾಧಕನೋರ್ವ ಬಂಧಮುಕ್ತನಾಗಿ ಭಗವತ್ ಜ್ಞಾನವೆಂಬ ಶಾಶ್ವತ - ಆದ್ದರಿಂದಲೇ ಅಮೃತವೆಂದು ಕರೆಯಲ್ಪಡುವ ಭಾವದ ಅನುಸಂಧಾನಕ್ಕೆ ತೊಡಗಬೇಕು. ಅದಕ್ಕೆ ಅಮೃತರೆಂದು ಕರೆಯಲ್ಪಡುವ ಬ್ರಹ್ಮ ವಾಯುಗಳ ಅನುಗ್ರಹ ಬೇಕು. "ವಾಯುರನಿಲಮಮೃತಮಥೇದಂ ಭಸ್ಮಾಂತಂ ಶರೀರಂ" ಯಾಜ್ಞೀಯ ಮಂತ್ರೋಪನಿಷತ್ (ಈಶಾವಾಸ್ಯ).

ಆಗ ಈ ಸಂಸಾರ ಚಕ್ರ ತುಪ್ಪದ ನೊರೆಯಂತೆ ಇರುವ ಅಶಾಶ್ವತವೆಂಬ ಜ್ಞಾನದಿಂದ ಸಾಧಕನೋರ್ವ ಬಂಧನದಿಂದ ಮುಕ್ತನಾಗುತ್ತಾನೆ. ನಂತರ ಭಗವತ್ ಜ್ಞಾನವೆಂಬ ಶಾಶ್ವತವಾದ ಅನುಸಂಧಾನಕ್ಕೆ ತೊಡಗುತ್ತಾನೆ. ಇದನ್ನೇ ಅಮೃತ ವೆಂದು ಕರೆಯುವುದು.

**ಅನವರತ ಹರಿಸ್ಮರಣೆಯೆಂಬ ಬೀಸೂರಿಗೆ**
**ಅನುವಾಗಿ ಕುಳಿತುಂಡು ಸುಖದಿ ತೇಗಿ**
**ಚಿನುಮಯ ಚಿದಾನಂದ ಪುರಂದರವಿಠಲನ**
**ಅನುದಿನ ನೆನೆ ನೆನೆದು ಸುಖಿಯಾಗಿರಯ್ಯ || ೫ ||** **(ಫಲಶ್ರುತಿ)**

ತಯಾರಾದ ತುಪ್ಪದಿಂದ ಅಂತಿಮವಾಗಿ **'ಹರಿಸ್ಮರಣೆ'ಯೆಂಬ ಬೀಸೂರಿಯನ್ನು (ಒಂದು ಬಗೆಯ ಹೋಳಿಗೆ/ಭಕ್ಷ್ಯ)** ಸವಿಯಬೇಕು. ಅಂದರೆ, ಇಷ್ಟೆಲ್ಲಾ ಸಾಧನೆಯ ಫಲವಾಗಿ ಸಿಗುವ ಹರಿನಾಮದ ಸುಖವನ್ನುಂಡು ಆನಂದದಿಂದ ತೃಪ್ತರಾಗಬೇಕು (ತೇಗಬೇಕು). ಯಾವಾಗಲೂ ಜ್ಞಾನಮಯನಾದ ಪುರಂದರ ವಿಠಲನನ್ನು ನೆನೆಯುತ್ತಾ ಸುಖವಾಗಿ ಬಾಳಬೇಕು ಎಂಬುದು ದಾಸರ ಹಿತನುಡಿ.

**ವಿಶೇಷಾರ್ಥ**: ಹೀಗೆ ಕಡೆದು, ಕಾಸಿ, ಗಟ್ಟಿಯಾಗಿ, ಪರಿಪಕ್ವವಾದ ಶುದ್ಧ ಜ್ಞಾನದ ಸವಿಯನ್ನು ಸವಿಯುತ್ತಾ ಸಾಧಕ ಬೆಳೆಯಬೇಕು. ಭಗವಂತನ ಗುಣಾನುಸಂಧಾನದ ವ್ಯಾಪ್ತಿಯನ್ನು ಅನುಭವಿಸುತ್ತಾ ಜೀವನ್ಮುಕ್ತನಾಗಿ ಆನಂದದಿಂದ ಬಾಳಬೇಕು ಜನ್ಮ ಸಾರ್ಥಕ ಗೊಳಿಸಿಕೊಳ್ಳಬೇಕು.

**ಸಾರಾಂಶ:**

ಈ ಹಾಡಿನ ಮೂಲಕ ಪುರಂದರದಾಸರು ಹೇಳುವ ಜೀವನ ಪಾಠವೇನೆಂದರೆ:

1. **ಗುರುಗಳ ಮಾರ್ಗದರ್ಶನ**ವೇ ನಮ್ಮ ಸಾಧನೆಯ ಮೊದಲ ಮೆಟ್ಟಿಲು.
2. ಅಹಂಕಾರ ಮತ್ತು ಕೆಟ್ಟ ಗುಣಗಳನ್ನು **ಜ್ಞಾನಾಗ್ನಿ**ಯಲ್ಲಿ ಸುಟ್ಟು ಹಾಕಬೇಕು.
3. ದೃಢವಾದ **ಸಿದ್ಧಾಂತ ಮತ್ತು ಶಾಂತಗುಣ**ದಿಂದ ಜೀವನವನ್ನು ಮಂಥನ ಮಾಡಬೇಕು.
4. ಕೊನೆಯಲ್ಲಿ ಸಿಗುವ **ಹರಿಸ್ಮರಣೆಯ ಸುಖ**ವೇ ಎಲ್ಲಕ್ಕಿಂತ ದೊಡ್ಡ ಆನಂದ ಮತ್ತು ಅದುವೇ ಮೋಕ್ಷಕ್ಕೆ ದಾರಿ.

**ಶ್ರೀ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀ ಕೃಷ್ಣಾರ್ಪಣಮಸ್ತು**

**ಲೇಖಕರು:** ಶ್ರೀಮತಿ ಶ್ವೇತಾ S.K., ಬೆಂಗಳೂರು.